ಉಡುಪಿ ಜಿಲ್ಲೆಯ ಅಬಕಾರಿ ಇಲಾಖೆಯ ಪ್ರಗತಿ ವರದಿಯನ್ನು ಈ ಕೆಳಗಿಂತೆ ಸಲ್ಲಿಸಲಾಗಿದೆ.

1) ಉಡುಪಿ ಜಿಲ್ಲೆಯಲ್ಲಿ 2016-17 ನೇ ಆರ್ಥಿಕ ಸಾಲಿನ ಎಪ್ರಿಲ್-16 ರಿಂದ ನವಂಬರ್-16 ರ ವರೆಗೆ ಇಲಾಖೆಗೆ ನೀಡಲಾಗಿರುವ ಮದ್ಯದ ಬಳಕೆಯ ಒಟ್ಟು ಗುರಿ 11,17,867 ಪೆಟ್ಟಿಗೆಗಳ ಪೈಕಿ 9,78,344 ಪೆಟ್ಟಿಗೆಗಳಷ್ಟು ಗುರಿ ಸಾಧನೆ ಮಾಡಲಾಗಿದ್ದು, ಶೇ. 87.52 ರಷ್ಟು ಗುರಿ ಸಾಧನೆ ಮಾಡಲಾಗಿರುತ್ತದೆ. ಕಳೆದ ವರ್ಷದ ಇದೇ ಅವಧಿಯ ಬಳಕೆಗೆ ಹೋಲಿಸಿದಾಗ ಶೇ. 0.14 ರಷ್ಟು ಬೆಳವಣಿಗೆ(Growth) ಆಗಿರುತ್ತದೆ.

2) ಜಿಲ್ಲೆಯಲ್ಲಿ ಹಾಲಿ ಆರ್ಥಿಕ ಸಾಲಿನಲ್ಲಿ_ಎಪ್ರಿಲ್-16 ರಿಂದ ನವಂಬರ್-16 ರ ವರೆಗೆ ರೂ.152,04,84,504 ರಷ್ಟು ರಾಜಸ್ವ ಸಂಗ್ರಹಣೆ ಮಾಡಲಾಗಿದ್ದು, ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದಾಗ ಶೆ.1.60 ರಷ್ಟು ರಾಜಸ್ವ ಸಂಗ್ರಹಣೆಯಲ್ಲಿ ಬೆಳವಣಿಗೆ ಆಗಿರುತ್ತದೆ.

3) ಜಿಲ್ಲೆಯಲ್ಲಿ 2016-17 ನೇ ಆರ್ಥಿಕ ಸಾಲಿನಲ್ಲಿ ಏಪ್ರಿಲ್-16 ರಿಂದ ನವೆಂಬರ್-16 ರವರೆಗೆ ಸನ್ನದುಗಳಲ್ಲಿ ಸನ್ನದು ಷರತ್ತುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಕಲಂ36 ಅಡಿಯಲ್ಲಿ 424 ಪ್ರಕರಣಗಳನ್ನು, ಅನಧಿಕೃತ ಸ್ಥಳಗಳಲ್ಲಿ ಮದ್ಯ ಸೇವನೆಗೆ ಸಂಬಂಧಿಸಿದಂತೆ ಕಲಂ 15ಎ ಅಡಿಯಲ್ಲಿ 170 ಪ್ರಕರಣಗಳನ್ನು, ಅಕ್ರಮ ಮದ್ಯ/ಬೀರ್ ಸಾಗಾಟ/ಮಾರಾಟ/ದಾಸ್ತಾನಿಗೆ ಸಂಬಂಧಿಸಿದಂತೆ ಕಲಂ 32 ಅಡಿಯಲ್ಲಿ 12 ಪ್ರಕರಣಗಳನ್ನು ದಾಖಲಿಸಲಾಗಿದ್ದು, 50.530 ಲೀ. ಅಕ್ರಮ ಮದ್ಯ, 116.780 ಲೀ. ಗೋವಾ ಮದ್ಯ, 105.620 ಲೀ. ಅಕ್ರಮ ಬೀರ್ ಹಾಗೂ 1 ಲೀ.

ಗೋವಾ ಬೀರ್ ಮತ್ತು 407 ಟೆಂಪೋ-1, ಬೊಲೇರೋ ಪಿಕಪ್-1, ಅಟೋರಿಕ್ಷಾ-1, ದ್ವಿಚಕ್ರ ವಾಹನ(ಆಕ್ಟಿವಾ)-1 ಹಾಗೂ ಮಾರುತಿ ಆಲ್ಟೋ ಕಾರ್-1 ನ್ನು ಜಪ್ತು ಮಾಡಿ ಈ ಸಂಬಂಧ 181 ಜನ ಆರೋಪಿತರುಗಳನ್ನು ಬಂಧಿಸಲಾಗಿರುತ್ತದೆ.

4) ಜಿಲ್ಲೆಯಲ್ಲಿ 2016-17 ನೇ ಆರ್ಥಿಕ ಸಾಲಿನಲ್ಲಿ ಏಪ್ರಿಲ್-16 ರಿಂದ ನವೆಂಬರ್-16 ರವರೆಗೆ ಸನ್ನದುಗಳಲ್ಲಿ ಸನ್ನದು ಷರತ್ತುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ 266 ಪ್ರಕರಣಗಳನ್ನು ರೂ.36,69,000/- ಹಾಗೂ ಅನಧಿಕೃತ ಸ್ಥಳಗಳಲ್ಲಿ ಮದ್ಯ ಸೇವನೆಗೆ ಸಂಬಂಧಿಸಿದಂತೆ ಕಲಂ. 15ಎ ಅಡಿಯಲ್ಲಿನ 104 ಪ್ರಕರಣಗಳನ್ನು ರೂ.2,92,000/- ದಂಡ ವಿಧಿಸಿ ಇಲಾಖಾ ಮೂಲಕ ಇತ್ಯರ್ಥ ಪಡಿಸಲಾಗಿದ್ದು, ಸದ್ರಿ ಅವಧಿಯಲ್ಲಿ ರೂ.44,95,500/- ದಂಡದ ಮೊತ್ತವನ್ನು ಮತ್ತು ಅಬಕಾರಿ ಪ್ರಕರಣಗಳಲ್ಲಿ ಜಪ್ತುಪಡಿಸಿದ ಸೊತ್ತುಗಳ ಹರಾಜಿನಿಂದ ರೂ.1,17,603/-ನ್ನು ಸರ್ಕಾರಕ್ಕೆ ಸಂದಾಯ ಮಾಡಲಾಗಿರುತ್ತದೆ.

ತಮ್ಮ ವಿಶ್ವಾಸಿ

ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಸ್,
ಉಡುಪಿ ಜಿಲ್ಲೆ, ಉಡುಪಿ.